190 (233) ಶ್ರೀ ಎಸ್.ಬಾಲರಾಜ್ (ಕೊಳ್ಳೇಗಾಲ) ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕೊಳ್ಳೇಗಾಲ ಟೌನ್ ಮುನಿಸಿಪಾಲಿಟಿ ಪ್ರದೇಶವನ್ನು ಮೂಲ ಭೂತ ಸೌಲಭ್ಯಗಳಿಂದ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ. ಕೆ.ಎಂ.ಆರ್.ಪಿ ಯೋಜನೆಯಡಿ ಅಭಿವೃದ್ಧಿ ಪಡಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ. ಈ ಯೋಜನೆಯ ಕಾರ್ಯ ಯಾವಾಗ ಪ್ರಾರಂಭವಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ. ಕೊಳ್ಳೇಗಾಲ ಪಟ್ಟಣದ ಮೂಲಸೌಕರ್ಯ ಅಭಿವೃದ್ಧಿಗಾಗಿ ಅದನ್ನು ಏಷ್ಮನ್ ಅಭಿವೃದ್ಧಿ ಬ್ಯಾಂಕ್ ಅನುದಾನಿತ ಕರ್ನಾಟಕ ಪೌರ ಸುಧಾರಣಾ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ.

ಆ. ಹೌದು. ಯೋಜನೆಯ ಪ್ರವೇಶಾವಕಾಶದ ಮಾನದಂಡಗಳಂತೆ ಅವಶ್ಯವುಳ್ಳ ಮಾಹಿತಿಯನ್ನು ನೀಡಲು ಪುರಸಭೆಗೆ ಸೂಚಿಸಲಾಗಿದೆ.

ಇ. ಮಾರ್ಚ್ 14 2006ರಂದು ವಿಶ್ವಬ್ಯಾಂಕಿನ ಬೋರ್ಡಿನ ಅನುಮೋದನೆಯಾಗಿದ್ದು ಏಪ್ರಿಲ್ ತಿಂಗಳ ಅಂತ್ಯದಲ್ಲಿ ಕರಾರು ಪತ್ರಕ್ಕೆ ಸಹಿ ಹಾಕಿದ ನಂತರ ಕಾಮಗಾರಿಗಳು ಪ್ರಾರಂಭವಾಗುವ ನಿರೀಕ್ಷೆ ಇದೆ.

191 (235) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)
ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕೊಳ್ಳೇಗಾಲ ಕ್ಷೇತ್ರದಲ್ಲಿನ ಅನೇಕ ಗ್ರಾಮಗಳಿಗೆ ಬಸ್ ಸಂಚಾರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ. ಈ ಹಿಂದೆ ಪರವಾನಗಿ ಪಡೆದಿರುವ ಬಸ್ ಸಂಚಾರದಲ್ಲಿ ವ್ಯತ್ಯಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ. ನೂತನ ಬಸ್ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್.ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ. ಹೌದು.

ಆ. ಕೊಳ್ಳೇಗಾಲ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳ್ಳೇಗಾಲ–ಬೆಳಕವಾಡಿ ಮತ್ತು ಕೊಳ್ಳೇಗಾಲ–ಬ್ಲಫ್–ಮಳವಳ್ಳಿ ಮಾರ್ಗದ ಮುಖ್ಯ ರಸ್ತೆಯು ರಾಷ್ಟ್ರೀಕೃತ ವಲಯಕ್ಕೆ ಸೇರಿದ್ದು, ಉಳಿದ ಎಲ್ಲಾ ಮಾರ್ಗಗಳು ರಾಷ್ಟ್ರೀಕೃತ ವಲ್ಲದ ವಲಯಕ್ಕೆ ಸೇರಿರುತ್ತವೆ. ಆದಾಗ್ಯೂ ಸಾರ್ವಜನಿಕ ಪ್ರಯಾಣಿಕರ ಕೋರಿಕೆ ಮೇರೆಗೆ ರಾಷ್ಟ್ರೀಕೃತವಲ್ಲದ ವಲಯದಲ್ಲಿನ 35 ಗ್ರಾಮಗಳಿಗೆ ಕೊಳ್ಳೇಗಾಲ ಘಟಕದಿಂದ ಸಾರಿಗೆ ವ್ಯವಸ್ಥೆಯನ್ನು ಕಲಿಸಲಾಗಿದೆ.

ಇ. ಹೌದು.

ಈ. ರಾಷ್ಟ್ರೀಕೃತವಲ್ಲದ ವಲಯದಲ್ಲಿ ಬರುವ ಗೌಡಹಳ್ಳಿ ಮಾರಾಪಾಳ್ಯ ದಾಸನದೊಡ್ಡಿ ಮಾರ್ಗಗಳಲ್ಲಿ ಪ್ರಸ್ತುತ ಸಾರ್ವಜನಿಕ ಪ್ರಯಾಣಿಕರು ಖಾಸಗಿ ವಾಹನಗಳ ಸಾರಿಗೆ ಸೌಲಭ್ಯವನ್ನು ಬಳಸಿಕೊಳ್ಳುತ್ತಿರುವುದರಿಂದ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರದ್ದುಗೊಳಿಸಿರುವ ಎರಡು ದುಂಡು ಸುತ್ತುವಳಿ ಕಾರ್ಯಚರಣೆ ಪುನರಾರಂಭಿಸುವ ಅವಶ್ಯಕತೆ ಸದ್ಯಕ್ಕೆ ಕಂಡು ಬಂದಿರುವುದಿಲ್ಲ.

ಉ. ಪ್ರಸಕ್ತ ಸಾಲಿನಲ್ಲಿ ಕೊಳ್ಳೇಗಾಲ ಘಟಕಕ್ಕೆ 8 ಹೊಸ ವಾಹನಗಳನ್ನು ನೀಡಲಾಗಿದೆ. ಅವುಗಳಲ್ಲಿ 4 ಗ್ರಾಮಾಂತರ ಸಾರಿಗೆ ವಾಹನಗಳು ಸೇರಿರುತ್ತವೆ.

192 (304) ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು) ಶ್ರೀ ಬಿ.ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಜಗತ್ ವಿಖ್ಯಾತ ಜೋಗ್ ಪ್ರವಾಸಿ ಕೇಂದ್ರಕ್ಕೆ ಪ್ರತೀ ವರ್ಷ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಎಷ್ಟು; (ಕಳೆದ 3 ವರ್ಷಗಳ ವಿವರಗಳನ್ನು ನೀಡುವುದು);

ಆ. ಈ ಪ್ರವಾಸಿಗರನ್ನು ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು; (3ವರ್ಷಗಳ ವಿವರ ನೀಡುವುದು);

ಇ. ಸರ್ಕಾರ ತನ್ನ ಪ್ರವಾಸೋದ್ಯಮ ನೀತಿಯನ್ನು ಪ್ರಕಟಿಸಲಿದೆಯೇ;

ಈ. ಹಾಗಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಬಿ.ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು)

ಅ. ಜೋಗ್ ಜಲಪಾತ ಪ್ರವಾಸಿ ಕೇಂದ್ರಕ್ಕೆ ಕಳೆದ 3 ವರ್ಷಗಳಿಂದ ಭೇಟಿ ನೀಡಿರುವ ದೇಶಿಯ ಪ್ರವಾಸಿಗರ ಸಂಖ್ಯೆ ಕೆಳಗಿನಂತಿದೆ.

1. 2003ನೇ ಸಾಲಿನಲ್ಲಿ 2,83,503
2. 2004ನೇ ಸಾಲಿನಲ್ಲಿ 4,28,766
3. 2005ನೇ ಸಾಲಿನಲ್ಲಿ 4,89,423